**ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು - ೫೬೦ ೦೦೧**

ಸಂಖ್ಯೆ: ಸಶಿಅ/ಸಿ1/ಜೂ.ಕಂ.ಪೋ.ಹೈರ್/56/2013-14 ದಿನಾಂಕ: 17.03.2014

## ಸುತ್ತೋಲೆ

ವಿಷಯ: ರಾಜ್ಯದಲ್ಲಿನ 203 ಬ್ಲಾಕ್‌ಗಳಿಗೆ ಜೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್‌ಗಳ ಸೇವೆಯನ್ನು ಖಾಸಗಿ ಅರ್ಹ ಸಂಸ್ಥೆಯ ಮೂಲಕ ಹೊರಗುತ್ತಿಗೆಯ ಆಧಾರದಲ್ಲಿ ಪಡೆದುಕೊಳ್ಳಲು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರಿಗೆ ಅಧಿಕಾರ ವಿಕೇಂದ್ರೀಕರಿಸುವ ಬಗ್ಗೆ.

******

ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮಗಳ ನಿರ್ವಹಣೆಗಾಗಿ 2013-14ನೇ ಸಾಲಿನಲ್ಲಿ ರಾಜ್ಯದಲ್ಲಿನ 203 ಬ್ಲಾಕ್ ಕಛೇರಿಗಳಿಗೆ ಜೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್‌ಗಳ ಸೇವೆಯನ್ನು M/s. Asain Security & Personnel Arrangements, Hubli ಸಂಸ್ಥೆಯ ಮೂಲಕ ಹೊರಗುತ್ತಿಗೆಯ ಆಧಾರದ ಮೇಲೆ ಕೇಂದ್ರ ಕಛೇರಿಯು ಒದಗಿಸುತ್ತಿದೆ. ಹೊರಗುತ್ತಿಗೆ ಅವಧಿಯು ದಿನಾಂಕ 31.03.2014 ಕ್ಕೆ ಮುಕ್ತಾಯವಾಗಲಿದೆ. ಆದರೆ, ಸದರಿ ಸಂಸ್ಥೆಯು ತನ್ನ ಸಿಬ್ಬಂದಿಗೆ ನಿಗದಿತ ಕಾಲದಲ್ಲಿ ಸಂಭಾವನೆಯನ್ನು ನೀಡದಿರುವ ಬಗ್ಗೆ ಕೇಂದ್ರ ಕಛೇರಿಗೆ ದೂರುಗಳು ಬಂದಿದ್ದು, ಈ ಬಗ್ಗೆ ಸದರಿ ಸಂಸ್ಥೆಗೆ ವಿವರಣೆಯನ್ನು ಸಲ್ಲಿಸುವಂತೆ ಸೂಚಿಸಿದಾಗ ಬ್ಲಾಕ್ ಕಛೇರಿಯ ಹಂತದಿಂದ ತನ್ನ ಸಿಬ್ಬಂದಿಯ ಹಾಜರಾತಿ ದೃಢೀಕರಣವು ಬರುವುದು ವಿಳಂಬವಾಗುತ್ತಿದೆಯೆಂದು, ಇದರಿಂದ ಸಂಭಾವನೆಯ ಪಾವತಿಯಲ್ಲಿ ವಿಳಂಬವುಂಟಾಗಿ, ಸಂಬಂಧಿಸಿದಂತೆ ಬಿಲ್ಲನ್ನು ಹಣ ಬಿಡುಗಡೆಗಾಗಿ ಸಲ್ಲಿಸುವಲ್ಲಿ ವಿಳಂಬವಾಗುತ್ತಿದೆಯೆಂದು ತಿಳಿಸಿರುತ್ತಾರೆ. ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗೆ ನಿಗದಿತ ಕಾಲದಲ್ಲಿ ಸಂಭಾವನೆಯು ದೊರಕದೇ ಇದ್ದಲ್ಲಿ ಅವರ ಸೇವಾ ಗುಣಮಟ್ಟವು ಕುಂಠಿತವಾಗುವ ಸಂಭವವಿರುತ್ತದೆ. ಆದರೆ, ಬ್ಲಾಕ್ ಹಂತಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಯ ಸಮರ್ಪಕ ಕರ್ತವ್ಯ ನಿರ್ವಹಣೆಯ ಹಾಜರಾತಿ ದೃಢೀಕರಣವನ್ನು ಮನವರಿಕೆ ಮಾಡಿಕೊಳ್ಳದೆ ಹೊರಗುತ್ತಿಗೆ ಸಂಸ್ಥೆಗಳ ಸಂಭಾವನೆಯ ಬಿಲ್ಲುಗಳನ್ನು ಪಾವತಿಗೆ ಪರಿಗಣಿಸಲು ಬರುವುದಿಲ್ಲ. ಆದ್ದರಿಂದ ಸಂಸ್ಥೆಯು ತನ್ನ ನೌಕರರಿಗೆ ಸಕಾಲದಲ್ಲಿ ಸಂಭಾವನೆಯನ್ನು ಪಾವತಿಸಲು ಅಗತ್ಯವಾದ ಕರ್ತವ್ಯ ನಿರ್ವಹಣೆಯ ಹಾಜರಾತಿ ದೃಢೀಕರಣವನ್ನು ಹಾಲಿ ನೌಕರರು ಸೇವೆ ಸಲ್ಲಿಸುತ್ತಿರುವ ಬ್ಲಾಕ್ ಹಂತದಿಂದ ತ್ವರಿತವಾಗಿ ಪಡೆದು, ನಂತರ, ಸಂಸ್ಥೆಯು ಸಲ್ಲಿಸುವ ಬಿಲ್ಲನ್ನು ಪರಿಶೀಲಿಸಿಕೊಂಡು, ಜಿಲ್ಲಾ ಹಂತದಲ್ಲಿಯೆ ಪಾವತಿಗೆ ಕ್ರಮವಹಿಸಿದಲ್ಲಿ ಅನಗತ್ಯವಾಗಿ ಉಂಟಾಗುವ ವಿಳಂಬವನ್ನು ತಡೆಗಟ್ಟುವುದು ಸಾಧ್ಯವಿದೆಯೆಂಬುದನ್ನು ಗಮನಿಸಿದೆ. ಈ ಹಿನ್ನೆಲೆಯಲ್ಲಿ 2014-15ನೇ ಸಾಲಿನಿಂದ ಜೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್‌ಗಳ ಸೇವೆಯನ್ನು ಅರ್ಹ ಖಾಸಗಿ ಸಂಸ್ಥೆಗಳಿಂದ ಹೊರಗುತ್ತಿಗೆಯ ಮೂಲಕ ಪಡೆಯಲು ಜಿಲ್ಲಾ ಹಂತಕ್ಕೆ ಅಧಿಕಾರ ವಿಕೇಂದ್ರೀಕರಿಸಿದೆ. ಇದರಂತೆ ಚಾಲ್ತಿಯಲ್ಲಿರುವ ನಿಯಮಗಳನ್ವಯ ಅರ್ಹ ಖಾಸಗಿ ಸಂಸ್ಥೆಯಿಂದ ಹೊರಗುತ್ತಿಗೆಯಲ್ಲಿ ಜೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್‌ಗಳ ಸೇವೆಯನ್ನು ಜಿಲ್ಲಾ ಹಂತದಲ್ಲಿ ಪಡೆಯಲು ಕ್ರಮವಹಿಸುವಂತೆ ಸೂಚಿಸಿದೆ.

***ಜಿಲ್ಲಾ ಹಂತದಲ್ಲಿ ಸೇವೆಯನ್ನು ಹೊರಗುತ್ತಿಗೆ ಮೂಲಕ ಪಡೆಯುವಾಗ ಈ ಕೆಳಕಂಡ ಅಂಶಗಳನ್ನು ಸ್ಪಷ್ಟವಾಗಿ ಪಾಲಿಸಲು ತಿಳಿಸಿದೆ.***

1) ಜೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್‌ಗಳ ಸೇವೆಯನ್ನು ಪಾರದರ್ಶಕ ನೀತಿಯನ್ವಯ ಟೆಂಡರ್ ಮೂಲಕ ಅರ್ಹ ಸಂಸ್ಥೆಯಿಂದ ಹೊರಗುತ್ತಿಗೆಯ ಆಧಾರದಲ್ಲಿ ಪಡೆಯಲು ಸಂಬಂಧಿಸಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಂದ ಅನುಮೋದನೆಯನ್ನು ಪಡೆದು